Reshmi Educational and Charitable Trust ®
Sri Murugha Rajendra Swamiji B.Ed and M.Ed College
Saraswatipura, Kusnoor Road, Kalaburagi
(Permanently affiliated to Gulbarga University, Kalaburagi and Accredited NAAC 'B' Grade)
E-mail: rect_9@yahoo.com website: www.rect.org Phone No.: 08472265502

Alumni has an active role in the regular institutional functioning such as

1. Motivating the freshly enrolled students
2. Involvement in the in-house curriculum development
3. Organization of various activities other than class room activities
4. Student mentoring
5. Financial contribution
6. Placement advice and support

**Our alumni have actively participated in various activities of the college.**

PRINCIPAL
Sri Murugha Rajendra Swamiji
B.Ed. and M.Ed. College,
Kusnoor Road, Kalaburagi-585106

ಮುರುಘರಾಜೇಂದ್ರ ಸ್ವಾಮೀಜಿ ಬಿ.ಇಡಿ,ಎಂ.ಇಡಿ
ಕಾಲೇಜಿನ ಅಲುಮ್ನಿ ಮೀಟ್-2022 ಕಾರ್ಯಕ್ರಮ

# ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಿ

■ **ವಿಕ ಸುದ್ದಿಲೋಕ** ಕಲಬುರಗಿ

ಕೆಲಸದ ವಿಷಯದಲ್ಲಿ ಸರಕಾರಿ, ಖಾಸಗಿ ಎಂಬ ಪ್ರತ್ಯೇಕ ಸಲ್ಲ, ವೃತ್ತಿಯಲ್ಲಿ ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಿದರೆ ವೃತ್ತಿ ಗೌರವದೊಂದಿಗೆಯಶಸ್ಸಿಯಾಗಲು ಸಾಧ್ಯ ಎಂದು ಅಫಜಲಪುರ ಠಾಣೆ ಸಿಪಿಐ ಜಗದೇವಪ್ಪ ಪಾಳಾ ಹೇಳಿದರು.

ನಗರದ ರೇಶ್ಮಿ ವಿದ್ಯಾಭವನದ ಸಭಾಂಗಣದಲ್ಲಿ ರೇಶ್ಮಿ ಎಜುಕೇಷನಲ್ ಮತ್ತು ಚಾರಿಟೇಬಲ್ ಟ್ರಸ್ಟ್‌ನ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಬಿ.ಇಡಿ ಮತ್ತು ಎಂ.ಇಡಿ ಕಾಲೇಜಿನ ಅಲುಮ್ನಿ ಮೀಟ್-2022 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರಕಾರಿ, ಖಾಸಗಿ ಕೆಲಸದಲ್ಲಿದ್ದರೂ ಅಷ್ಟೇ ಯಾರಿಗೂ ಕೆಡುಕುವನ್ನುಂಟು ಮಾಡಬಾರದು. ಯಾರಿಗೂ ಕೆಟ್ಟದು ಬಯಸದೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾಗ ಮಾತ್ರ ವ್ಯಕ್ತಿಯ ವರ್ಚಸ್ಸು ಹೆಚ್ಚಲಿದೆ. ಬಿ.ಇಡಿ. ಕಾಲೇಜಿನ ಬೋಧಕರು ಕಲಿಸಿದ ಗುಣಾತ್ಮಕ ಶಿಕ್ಷಣದಿಂದ ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತು ಎಂದು ಸ್ಮರಿಸಿದರು.

ಉಪನ್ಯಾಸಕಿ ಶಾಂತಾ ಅಷ್ಟಗಿ ಮಾತನಾಡಿ, ಸದ್ಯ ಶಿಕ್ಷಣ ಸಂಸ್ಥೆಗಳು ವ್ಯಾಪಾರೀಕರಣಕ್ಕೆ ಇಳಿದಿವೆ. ಗುಣಾತ್ಮಕ ಶಿಕ್ಷಣ ಪಡೆಯಬೇಕಾದರೆ ದುಬಾರಿ ಶುಲ್ಕ ತೆತ್ತಿ ಕಲಿಯುವ ಸ್ಥಿತಿ ಎದುರಾಗಿದೆ. ಮನುಷ್ಯತ್ವ, ಮಾನವೀಯ ಮೌಲ್ಯಗಳು ಹೆಚ್ಚು ಒತ್ತು ನೀಡಿ ನೈತಿಕ ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದರು.

ಗುಲ್ಬರ್ಗ ವಿವಿ ಮೌಲ್ಯಮಾಪನ ಕುಲಸಚಿವ ಪ್ರೊ.ಮೇಧಾವಿನಿ ಕಟ್ಟಿ, ರೇಷ್ಮಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಭಾರತಿ ಎನ್.ರೇಶ್ಮಿ ಮಾತನಾಡಿದರು. ಶ್ರೀ ಮುರುಘರಾಜೇಂದ್ರ ಬಿ.ಇಡಿ, ಎಂ.ಇಡಿ ಕಾಲೇಜಿನ ಪ್ರಾಚಾರ್ಯರಾದ ಡಾ.ರಾಜಶೇಖರ ಶಿರವಾಳಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ಶರದ್ ಎನ್. ರೇಶ್ಮಿ, ಟ್ರಸ್ಟಿ ಶಿಶಿರ್ ಎನ್.ರೇಶ್ಮಿ, ಐಕ್ಯೂಎಸಿ ಸಂಯೋಜಕಿ ಡಾ.ಗೀತಾ ಆರ್.ಎಂ, ಅಲಮ್ನಿ ಸಂಯೋಜಕ ಮುರಳೀಧರ ಕುಲಕರ್ಣಿ, ಶರಣಪ್ಪ ಚವ್ಹಾಣ, ಶಿಕ್ಷಕ ಸಿದ್ದಲಿಂಗ ಬಾಳಿ, ಶ್ರೀಶೈಲ್ ಮಠಪತಿ, ಜಯಲಕ್ಷ್ಮಿ ಪಾಟೀಲ್, ಶರಣಗೌಡ ಇತರರಿದ್ದರು.




**ನಗರದ ರೇಶ್ಮಿ ವಿದ್ಯಾಭವನದ ಸಭಾಂಗಣದಲ್ಲಿ ಅಲುಮ್ನಿ ಮೀಟ್ ಕಾರ್ಯಕ್ರಮದಲ್ಲಿ ಎಂ.ಇಡಿ ವಿದ್ಯಾರ್ಥಿಗಳು ತಯಾರಿಸಿದ ಸಂಶೋಧನಾ ಕೈಪಿಡಿ ಬಿಡುಗಡೆ ಮಾಡಲಾಯಿತು. ಸಿಪಿಐ ಜಗದೇವಪ್ಪ ಪಾಳಾ, ಭಾರತಿ ರೇಶ್ಮಿ ಇತರರಿದ್ದರು.**

> **ರೇಶ್ಮಿ ವಿದ್ಯಾಸಂಸ್ಥೆಯು ಉತ್ತರೋತ್ತರಾಗಿ ಬೆಳೆದು ಖಾಸಗಿ ವಿಶ್ವವಿದ್ಯಾಲಯವಾಗಿ ಹೊರಹೊಮ್ಮಲಿ. ಇಲ್ಲಿ ಗುಣಾತ್ಮಕ ಶಿಕ್ಷಣ, ಕಲಿಕಾ ವಾತಾವರಣ ಇದೆ. 2003-04 ನೇ ಮೊದಲ ಬಿ.ಇಡಿ ಬ್ಯಾಚ್‌ನ ಎಲ್ಲ ವಿದ್ಯಾರ್ಥಿಗಳು ಒಳ್ಳೆಯ ಸ್ಥಾನಮಾನಗಳಲ್ಲಿದ್ದಾರೆ.**
>
> **-ಜಗದೇವಪ್ಪ ಪಾಳಾ,**
> ಅಫಜಲಪುರ ಸಿಪಿಐ













**PRINCIPAL**
Sri Murugha Rajendra Swamiji
B.Ed. and M.Ed. College,
Kusnoor Road, Kalaburagi-585106